## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:05:ಆರ್.ಬಿ.ಎಲ್:2010

ORIGINAL.

ಕರ್ನಾಟಕ ಸರ್ಕಾರ ಸಚಿವಾಲಯ,
3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 28/05/2012.
30

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅತೀ ಜರೂರು

ಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ,

ಮಾನ್ಯರೆ,

| | |
|---|---|
| ವಿಷಯ: | ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರುಸಮೀಕ್ಷೆ ನಡೆಸುವ ಬಗ್ಗೆ. |
| ಉಲ್ಲೇಖ: | ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂ:ಎಸ್ 11011/05/98-ಬಿಎಲ್ (Vol-2) ದಿ:28/3/2012. (ಎರಡು ಪ್ರತ್ಯೇಕ ಆದೇಶಗಳು) |

******

ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರುಸಮೀಕ್ಷೆ ಕಾರ್ಯವನ್ನು ಪ್ರತಿ 3 ವರ್ಷಕ್ಕೊಮ್ಮೆ ಕೈಗೊಳ್ಳಬೇಕಾಗಿರುತ್ತದೆ. ಪ್ರಸ್ತುತ ಎಲ್ಲಾ ಜಿಲ್ಲೆಗಳಲ್ಲಿ ಜೀತದಾಳುಗಳನ್ನು ಪತ್ತೆಹಚ್ಚುವ ಅಗತ್ಯತೆಯಿದ್ದು, ಈ ಸಂಬಂಧ ಶೀಘ್ರವಾಗಿ ತಮ್ಮ ಜಿಲ್ಲೆಗಳಲ್ಲಿ ಸಮೀಕ್ಷಾ ತಂಡವನ್ನು ರಚಿಸಬೇಕಾಗಿರುತ್ತದೆ. 2000-01 ಹಾಗೂ 2001-02ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯಲ್ಲಿ ಈಗಾಗಲೇ ಮರುಸಮೀಕ್ಷೆಯನ್ನು ನಡೆಸಲಾಗಿದ್ದು, ಸಮೀಕ್ಷೆಯ ಮಾಹಿತಿ/ದಾಖಲೆಗಳು ತಮ್ಮ ಕಛೇರಿಯಲ್ಲಿ ಲಭ್ಯವಿರುತ್ತದೆ. 1976ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆ ಹಾಗೂ ನಿಯಮಗಳನ್ವಯ ಜಿಲ್ಲಾ ಮತ್ತು ಉಪವಿಭಾಗಮಟ್ಟದ ಜಾಗೃತಿ ಸಮಿತಿಯನ್ನು ತಮ್ಮ ಜಿಲ್ಲೆಯಲ್ಲಿ ರಚಿಸಿರುವುದರಿಂದ ಸದರಿ ಸಮಿತಿಯ ಸದಸ್ಯರೊಳಗೊಂಡಂತೆ ಸಮೀಕ್ಷಾ ತಂಡವನ್ನು ರಚಿಸಲು ಕ್ರಮ ವಹಿಸುವುದು. ಕೇಂದ್ರ ಸರ್ಕಾರವು ರಾಜ್ಯದಲ್ಲಿ ಜೀತದಾಳುಗಳ ಸಮೀಕ್ಷೆ ಕಾರ್ಯ ನಡೆಸುವ ಉದ್ದೇಶಕ್ಕಾಗಿ ಉಲ್ಲೇಖಿತ ಪತ್ರದಲ್ಲಿ ಒಟ್ಟು 60.00ಲಕ್ಷಗಳ ಅನುದಾನವನ್ನು (ಪ್ರತಿ ಜಿಲ್ಲೆಗೆ ರೂ.2.00ಲಕ್ಷಗಳಂತೆ) ಬಿಡುಗಡೆ ಮಾಡಿರುತ್ತದೆ. ಸದರಿ ಅನುದಾನವನ್ನು ಪ್ರತ್ಯೇಕ ಆದೇಶದಲ್ಲಿ ತಮ್ಮ ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಸದ್ಯದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು. ಈ ಸಮೀಕ್ಷಾ ತಂಡವು ಕೈಗೊಳ್ಳಬೇಕಾಗಿರುವ ಕ್ರಮಗಳ ಕುರಿತಾಗಿ ಮಾರ್ಗಸೂಚಿಯು ಈ ಕೆಳಗಿನಂತಿದೆ. ಹಾಗೂ ಇದರೊಂದಿಗೆ **ಅನುಬಂಧ 1 ರಿಂದ 9ರವರೆಗಿನ ನಮೂನೆಗಳನ್ನು** ಒದಗಿಸಿದೆ.

1. ಪ್ರಮುಖವಾಗಿ ನಿಮ್ಮ ಜಿಲ್ಲೆಯಲ್ಲಿ ಸಮೀಕ್ಷೆಯ ಕುರಿತು ವ್ಯಾಪಕ ಪ್ರಚಾರವನ್ನು ನೀಡತಕ್ಕದು.
2. ಸಮೀಕ್ಷಾ ತಂಡವನ್ನು ಸ್ಥಳೀಯ ಸರ್ಕಾರೇತರ ಸಂಘಸಂಸ್ಥೆಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತರು, ಶಿಕ್ಷಣ/ಕಂದಾಯ/ರೇಷ್ಮೆ/ಕಾರ್ಮಿಕ/ಸಮಾಜಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ/ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆಗಳ ಸಿಬ್ಬಂದಿಯನ್ನು ಒಳಗೊಂಡಂತೆ ರಚಿಸತಕ್ಕದ್ದು. ಈ ತಂಡಗಳಿಗೆ ವಿವಿಧ ಹಂತದಲ್ಲಿ ತರಬೇತಿಯನ್ನು ನೀಡಲು ನುರಿತ ತರಬೇತಿದಾರರನ್ನು ಸಂಘ ಸಂಸ್ಥೆಗಳಿಂದ ನಿಯೋಜಿಸಿಕೊಳ್ಳತಕ್ಕದು.
3. ಸಮೀಕ್ಷಾ ತಂಡವು ಗ್ರಾಮ/ಪಟ್ಟಣ ಪ್ರದೇಶಕ್ಕೆ ಭೇಟಿ ನೀಡಿದಾಗ ಅನುಬಂಧ-1ರಲ್ಲಿನ ಮಾಹಿತಿಯನ್ನು ಪಡೆಯತಕ್ಕದ್ದು.
4. ಸಮೀಕ್ಷಾ ತಂಡವು ಯಾವುದೇ ಉದ್ದಿಮೆ/ಪ್ರಕ್ರಿಯೆ ಸ್ಥಳಕ್ಕೆ ಭೇಟಿ ನೀಡಿದಾಗ **ಅನುಬಂಧ-2ರಲ್ಲಿನ** ಮಾಹಿತಿಯನ್ನು ಪಡೆಯತಕ್ಕದ್ದು.
5. ನಿಮ್ಮ ಜಿಲ್ಲೆಯಲ್ಲಿ ಜೀತದಾಳುಗಳಾಗಿ ಹೆಚ್ಚಾಗಿ ದುಡಿಯುತ್ತಿರುವ ಉದ್ಯೋಗಗಳನ್ನು ಗುರುತಿಸಿ, ಕಡ್ಡಾಯವಾಗಿ ಆ ಉದ್ಯೋಗದ ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳುವುದು.
6. ಸಮೀಕ್ಷಾ ತಂಡವು ಸಮೀಕ್ಷಾ ಸಮಯದಲ್ಲಿ ತೆಗೆದ ಕನಿಷ್ಠ ಎರಡು ಭಾವ ಚಿತ್ರಗಳನ್ನು ಹಾಗೂ ಗುರುತಿಸಿದ ಜೀತದಾಳಗಳ ಭಾವ ಚಿತ್ರಗಳನ್ನು **ಅನುಬಂಧ-5ರಲ್ಲಿಯ ನಮೂನೆಯಲ್ಲಿ** ಸಲ್ಲಿಸತಕ್ಕದ್ದು.

7. ಜೀತದಾಳು ಧೃಡಪಟ್ಟಲ್ಲಿ, ತಂಡವು ಸದರಿ ಕಾನೂನು ಉಲ್ಲಂಘನೆಗಾಗಿ ಅಂತಹ ಮಾಲೀಕರ ವಿರುದ್ಧ ಆ ಪ್ರದೇಶಕ್ಕೆ ಸಂಬಂಧಪಟ್ಟ ತಹಶೀಲ್ದಾರರು ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಯವರಿಗೆ **ಅನುಬಂಧ-6ರಲ್ಲಿಯ ನಮೂನೆಯಲ್ಲಿ** ವರದಿ ಸಲ್ಲಿಸತಕ್ಕದ್ದು.
8. ಪ್ರತಿಯೊಂದು ಗ್ರಾಮ/ಪಟ್ಟಣ ಪ್ರದೇಶ/ಉದ್ದಿಮೆಯ ಸಮೀಕ್ಷೆಯ ವರದಿಯನ್ನು ತಂಡವು ಅನುಬಂಧ-7ರ ನಮೂನೆಯಲ್ಲಿ ಸಂಬಂಧಿಸಿದ ತಹಶೀಲ್ದಾರರಿಗೆ ಸಲ್ಲಿಸತಕ್ಕದ್ದು.
9. ಪ್ರತಿ ವಾರ ಸಮೀಕ್ಷಾ ತಂಡವು **ಅನುಬಂಧ-8ರಲ್ಲಿಯ ನಮೂನೆಯಲ್ಲಿ** ವರದಿಯನ್ನು ಸಂಬಂಧಿಸಿದ ತಹಶೀಲ್ದಾರರಿಗೆ ಸಲ್ಲಿಸತಕ್ಕದ್ದು.
10 ಅಂತಿಮವಾಗಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಕ್ರೋಡಿಕೃತ ವರದಿಯನ್ನು **ಅನುಬಂಧ 9**ರಲ್ಲಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಮುಂದಿನ ಅಗತ್ಯ ಕ್ರಮಗಳನ್ನು ಕಾಯ್ದೆಯಂತೆ ಕೈಗೊಳ್ಳುವುದು.

ಜೀತದಾಳುಗಳನ್ನು ಪತ್ತೆಹಚ್ಚುವ ಕಾರ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೆ ತಮ್ಮ ಪಾತ್ರವು ಹೆಚ್ಚಿನದಾಗಿರುತ್ತದೆ. ಆದ್ದರಿಂದ ಸಮೀಕ್ಷೆ ಕಾರ್ಯದ ಪ್ರತಿ ಹಂತದಲ್ಲಿ ಮಾಹಿತಿಯನ್ನು ಜಾಗರೂಕತೆಯಿಂದ ಸಂಗ್ರಹಿಸಿ ಅಂತಿಮ ಕ್ರೋಢಿಕೃತ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ **ಅನುಬಂಧ-9ರ** ನಮೂನೆಯಲ್ಲಿ ತಯಾರಿಸಿ **2012ರ ಜುಲೈ ಅಂತ್ಯದೊಳಗಾಗಿ** ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,

30/5/12

(ಡಾ:ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:** ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

## ಅನುಬಂಧ–1

## ಜೀತದಾಳುಗಳನ್ನು ಗುರುತಿಸುವ ಸಮೀಕ್ಷಾ ಸಮಯದಲ್ಲಿ ಗ್ರಾಮದಲ್ಲಿ ಸಂಗ್ರಹಿಸಬೇಕಾದ ವಿವರದ ನಮೂನೆ

ಜಿಲ್ಲಾ:

ತಾಲ್ಲೂಕು:

ಗ್ರಾಮ:

ಪಟ್ಟಣ ಪ್ರದೇಶ: ದಿನಾಂಕ:

1. ಜನಸಂಖ್ಯೆ:

| ಕ್ರ ಸಂ | ಜನ ಸಂಖ್ಯೆ | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|
| 1. | ಒಟ್ಟು ಜನಸಂಖ್ಯೆ | | | |
| 2. | ಪರಿಶಿಷ್ಟ ಜಾತಿ | | | |
| 3. | ಭೂ ರಹಿತ ಕಾರ್ಮಿಕರು | | | |
| 4. | ಚಿಕ್ಕ ಹಿಡುವಳಿದಾರರು | | | |
| 5. | ಅತೀ ಚಿಕ್ಕ ಹಿಡುವಳಿದಾರರು | | | |

**2.** ಗ್ರಾಮದಲ್ಲಿ ದುರ್ಬಲ ಜನರು ವಾಸಿಸುವ ಪ್ರದೇಶಗಳ ಬಗ್ಗೆ:

| ಕ್ರ ಸಂ | ಸ್ಥಳ/ಓಣಿಯ ಹೆಸರು | ದುರ್ಬಲ ವರ್ಗದ ಕುಟುಂಬಗಳ ಸಂಖ್ಯೆ (ಸರಾಸರಿ) | ಈ ಸ್ಥಳಗಳಿಗೆ ತಂಡವು ಭೇಟಿ ನೀಡಿದೆಯೇ? (ಹೌದು/ಇಲ್ಲ) |
|---|---|---|---|
| | | | |

3. ಪರಿಶಿಷ್ಟಜಾತಿ/ಪಂಗಡಗಳಿಗೆ ಸೇರಿದವರ; ಭೂ ರಹಿತ ಕಾರ್ಮಿಕರ: ಚಿಕ್ಕ/ ಅತೀ ಚಿಕ್ಕ ಹಿಡುವಳಿ ಜೊತೆಗೆ ಮಾಡಿದ ಸಂದರ್ಶನದ ಬಗ್ಗೆ ವಿವರ:

| ಕ್ರ ಸಂ | ಸ್ಥಳ | ಹಾಜರಿದ್ದ ಜನರ ಸಂಖ್ಯೆ | |
|---|---|---|---|
| | | ಪುರುಷರು | ಮಹಿಳೆಯರು |
| | | | |

4. ತಂಡವು ಕಾರ್ಮಿಕರಿಗೆ ಯಾವ ರೂಪದಲ್ಲಿ ಕೂಲಿಯನ್ನು ಕೊಡುತ್ತಾರೆ ಅನ್ನುವ ಬಗ್ಗೆ ವಿಚಾರಿಸಬೇಕು ಮತ್ತು: ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಬೇಕು:

| ದಿನಗೂಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | ಕೂಲಿ ಇಲ್ಲದೇ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | ಕೂಲಿಯ ಸ್ವರೂಪ | | |
|---|---|---|---|---|
| | | ನಗದು | ವಸ್ತುಗಳಲ್ಲಿ | ಭಾಗಶ: ನಗದು ಭಾಗಶ: ವಸ್ತುಗಳಲ್ಲಿ |
| 1 | 2 | 3 | 4 | 5 |
| | | | | |

ಕೂಲಿ ಇಲ್ಲದೇ ಮಾಡುವ ಕಾರ್ಮಿಕರಿಗೆ ಅನುಬಂಧ –4ರ ಪ್ರಶ್ನಾವಳಿಗೆ ಉತ್ತರವನ್ನು ತಂಡವು ಪಡೆಯತಕ್ಕದ್ದು.

ಅನುಬಂಧ-2

ಜೀತದಾಳುಗಳನ್ನು ಗುರುತಿಸುವ ಸಮೀಕ್ಷಾ ಸಮಯದಲ್ಲಿ ಉದ್ದಿಮೆ/ಪ್ರಕ್ರಿಯೆ ಸಂಸ್ಥೆಯಲ್ಲಿ ಸಂಗ್ರಹಿಸಬೇಕಾದ ವಿವರದ ನಮೂನೆ

ಜಿಲ್ಲಾ:

ತಾಲ್ಲೂಕು:

ಗ್ರಾಮ:

ಪಟ್ಟಣಪ್ರದೇಶ: ದಿನಾಂಕ:

1. ಸಂಸ್ಥೆಯ ಹೆಸರು:
2. ಸಂಸ್ಥೆಯ ಚಟುವಟಿಕೆಗಳು:
3. ಸಂಸ್ಥೆಯ ಕಾರ್ಮಿಕರ ವಿವರ:

| ಕ್ರ.ಸಂ | ವಿವರ | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|
| 1. | ಕಾರ್ಮಿಕರ ಸಂಖ್ಯೆ | | | |
| 2. | ಪರಿಶಿಷ್ಟ ಜಾತಿ | | | |
| 3. | ಪರಿಶಿಷ್ಟ ಪಂಗಡ | | | |

4. ತಂಡವು ಕಾರ್ಮಿಕರಿಗೆ ಯಾವ ರೂಪದಲ್ಲಿ ಕೂಲಿಯನ್ನು ಕೊಡುತ್ತಾರೆ ಅನ್ನುವ ಬಗ್ಗೆ ವಿಚಾರಿಸಬೇಕು ಮತ್ತು ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಬೇಕು.

| ದಿನಗೂಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | ಕೂಲಿ ಇಲ್ಲದೇ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | ಕೂಲಿಯ ಸ್ವರೂಪ | | |
|---|---|---|---|---|
| | | ನಗದು | ವಸ್ತುಗಳಲ್ಲಿ | ಭಾಗಶ: ನಗದು ಭಾಗಶ: ವಸ್ತುಗಳಲ್ಲಿ |
| 1. | 2 | 3 | 4. | 5 |
| | | | | |

- ಕೂಲಿ ಇಲ್ಲದೇ ಕೆಲಸ ಮಾಡುವ ಕಾರ್ಮಿಕರಿಗೆ ಅನುಬಂಧ-4ರ ಪ್ರಶ್ನಾವಳಿಗೆ ಉತ್ತರವನ್ನು ತಂಡವು ಪಡೆಯತಕ್ಕದ್ದು.

Format of Survey file

## ಅನುಬಂಧ-3

**6 ತಿಂಗಳಿಂದ 1 ವರ್ಷದವರೆಗೆ ಒಬ್ಬರೇ ಮಾಲೀಕರ ಹತ್ತಿರ ಮಾಡುತ್ತಿರುವ ಕಾರ್ಮಿಕರಿಗೆ ಸಮೀಕ್ಷಾ ತಂಡವು ಕೇಳುವ ಪ್ರಶ್ನಾವಳಿ ನಮೂನೆ**

| | | |
|---|---|---|
| 1. | ಕಾರ್ಮಿಕನ ಹೆಸರು | |
| 2. | ಕಾರ್ಮಿಕನ ಹಾಲಿ ವಿಳಾಸ | |
| 3. | ಕಾರ್ಮಿಕನ ಖಾಯಂ ವಿಳಾಸ | |
| 4. | ಕಾರ್ಮಿಕನ ಧರ್ಮ:ಜಾತಿ | |
| 5. | ಕಾರ್ಮಿಕನ ವಯಸ್ಸು | |
| 6. | ಮಾಲೀಕ: ಸಂಸ್ಥೆಯ : ವಿಳಾಸ | |
| 7. | ಮಾಲೀಕ:ಸಂಸ್ಥೆಯ:ವಿವರ | |
| 8. | ಕೆಲಸದ ಸ್ವರೂಪ/ವಿವರ | |
| 9. | ನಿಮಗೆ ಕೊಡುತ್ತಿರುವ ಕೂಲಿ ಎಷ್ಟು? | |
| 10. | ನೀವು ಏಕೆ ಸದರಿ ಮಾಲೀಕರಲ್ಲಿ ಕೆಲಸ ಮಾಡುತ್ತಿದ್ದೀರಿ? | |
| 11. | ನಿಮಗೆ ಇದೇ ಕೂಲಿ ಮತ್ತು ಸೌಲಭ್ಯಗಳನ್ನು ಕೊಟ್ಟಲ್ಲಿ ಬೇರೆ ಮಾಲೀಕರಲ್ಲಿ ಕೆಲಸ ಮಾಡಲು ಸ್ವತಂತ್ರ ಇದೆಯೇ? | |

- 11ನೇ ಪ್ರಶ್ನೆಗೆ ಇಲ್ಲಾ ಎಂದು ಉತ್ತರ ನೀಡುವವರಿಗೆ ತಂಡವು ಅನುಬಂಧ-4ರ ಪ್ರಶ್ನಾವಳಿಯನ್ನು ಸಹ ಕೇಳತಕ್ಕದ್ದು.

# ಅನುಬಂಧ-4

1.ಕೂಲಿ ಇಲ್ಲದೇ ಕೆಲಸ ಮಾಡುವ ಕಾರ್ಮಿಕರಿಗೆ,

2. ನಿಗದಿತ ಕನಿಷ್ಠ ಕೂಲಿಗಿಂತ ಕಡಿಮೆ ಕೂಲಿ ಪಡೆಯುತ್ತಿರುವ ಕಾರ್ಮಿಕರಿಗೆ

3.ಅನುಬಂಧ-1ರಲ್ಲಿ ಕಲಂ 6ರ ಪ್ರಶ್ನೆಗೆ ಇಲ್ಲಾ ಎಂದು ಉತ್ತರಿಸುವವರಿಗೆ,

4.1 ವರ್ಷಕ್ಕೆ ಮೇಲ್ಪಟ್ಟು ಒಬ್ಬರೇ ಮಾಲೀಕರ ಹತ್ತಿರ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಹಾಗೂ

5.ಅನುಬಂಧ-3ರಲ್ಲಿ ಪ್ರಶ್ನೆ 11ಕ್ಕೆ ಇಲ್ಲಾ ಎಂದು ಉತ್ತರಿಸುವ ಪ್ರತಿಯೊಬ್ಬ ಕಾರ್ಮಿಕರಿಗೆ ಸಮೀಕ್ಷಾ ತಂಡವು ಕೇಳುವ ಪ್ರಶ್ನಾವಳಿ ನಮೂನೆ

## ಭಾಗ-1

### ಕಾರ್ಮಿಕರ ವಿವರಗಳು

| | | |
|---|---|---|
| 1. | ಕಾರ್ಮಿಕರ ಹೆಸರು | |
| 2. | ಕಾರ್ಮಿಕರ ಹಾಲಿ ವಿಳಾಸ | |
| 3. | ಕಾರ್ಮಿಕನ ಖಾಯಂ ವಿಳಾಸ | |
| 4. | ಕಾರ್ಮಿಕನ ಧರ್ಮ/ಜಾತಿ | |
| 5. | ಕಾರ್ಮಿಕರ ವಯಸ್ಸು | |
| 6. | ಕೆಲಸದ ಸ್ವರೂಪ/ವಿವರ | |
| 7. | ಕೆಲಸದ ವೇಳೆ | |

ಕಾರ್ಮಿಕರ ವಯಸ್ಸು 14 ವರ್ಷಕ್ಕಿಂತ ಕಡಿಮೆ ಇದ್ದರೆ ಅವರು ಬಾಲಕಾರ್ಮಿಕರು ಇರುವ ಬಗ್ಗೆ ಸಮೀಕ್ಷೆ ನಡೆಸತಕ್ಕದ್ದು.

5. ಕಾರ್ಮಿಕರು ನಿಗದಿತ ಕನಿಷ್ಠ ಕೂಲಿ ಪಡೆಯುತ್ತಿರುವ ಬಗ್ಗೆ:

ತಂಡವು ಕಾರ್ಮಿಕರಿಗೆ ಸರಕಾರವು ನಿಗದಿಪಡಿಸಿದ ಕನಿಷ್ಠ ಕೂಲಿಯ ಬಗ್ಗೆ ಓದಿ ತಿಳಿಸಿ ಹೇಳಬೇಕು ಮತ್ತು ನಿಗದಿತ ಕನಿಷ್ಠ ಕೂಲಿಯನ್ನು ಕೊಡಲಾಗುತ್ತಿದೆಯೇ ಎನ್ನುವ ಬಗ್ಗೆ ವಿಚಾರಿಸಬೇಕು ಹಾಗೂ ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಬೇಕು

| ಕೆಲಸದ ಸ್ವರೂಪ/ವಿವರ | ಸರ್ಕಾರವು ನಿಗದಿಪಡಿಸಿದ ಕನಿಷ್ಠ ಕೂಲಿ | ಕೆಲಸಗಾರರು ಪಡೆಯುತ್ತಿರು ಕೂಲಿ | ನಿಗದಿತ ಕಡಿಮೆ ಕೂಲಿ ಪಡೆಯುತ್ತಿರುವ ಕಾರ್ಮಿಕರ ಸಂಖ್ಯೆ |
|---|---|---|---|
| 1 | 2 | 3 | 4 |
| | | | |

- ನಿಗದಿತ ಕನಿಷ್ಠ ಕೂಲಿಗಿಂತ ಕಡಿಮೆ ಕೂಲಿ ಪಡೆಯುತ್ತಿರುವ ಕಾರ್ಮಿಕರಿಗೆ ಅನುಬಂಧ–4ರ ಪ್ರಶ್ನಾವಳಿಯನ್ನು ತಂಡಲು ಕೇಳತಕ್ಕದ್ದು:

  6. ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರಿಗೆ ಈ ಕೆಳಗಿನಂತೆ ಪ್ರಶ್ನಿಸಿ ಮಾಹಿತಿ ಪಡೆಯತಕ್ಕದ್ದು

  (ಅ) ನೀವು ಯಾರದೇ ಕರೆಯ ಮೇರೆಗೆ ಕೆಲಸಕ್ಕೆ ಹೋಗುತ್ತೀರಾ?

| ಹೌದು ಎಂದು ಉತ್ತರಿಸುವವರ ಸಂಖ್ಯೆ | ಇಲ್ಲಾ ಎಂದು ಉತ್ತರಿಸುವವರ ಸಂಖ್ಯೆ |
|---|---|
| | |

- ಇಲ್ಲಾ ಎಂದು ಉತ್ತರಿಸುವವರಿಗೆ–4ರ ಪ್ರಶ್ನಾವಳಿಗಳಿಗೆ ಉತ್ತರವನ್ನು ಪಡೆಯತಕ್ಕದ್ದು.

  (ಬ) ಒಬ್ಬರೇ ಮಾಲೀಕರ ಕಡೆಗೆ ಸತತವಾಗಿ ಕೆಲಸ ಮಾಡುತ್ತಿದ್ದೀರಾ?

| ಅವಧಿ | ಕಾರ್ಮಿಕರ ಸಂಖ್ಯೆ |
|---|---|
| 6 ತಿಂಗಳಿಗಿಂತ ಕಡಿಮೆ | |
| 6 ತಿಂಗಳಿಗಿಂತ 1 ವರ್ಷ | |
| 1 ವರ್ಷಕ್ಕೆ ಮೇಲ್ಪಟ್ಟು | |

- 6 ತಿಂಗಳಿಂದ 1 ವರ್ಷ ಅವಧಿಯಲ್ಲಿ ಒಬ್ಬರೇ ಮಾಲೀಕರ ಕಡೆಗೆ ಸತತವಾಗಿ ಕೆಲಸ ಮಾಡುತ್ತಿರುವ ಎಲ್ಲ ಕಾರ್ಮಿಕರಿಂದ ಅನುಬಂಧ–3ರ ಪ್ರಶ್ನಾವಳಿಗೆ ಉತ್ತರವನ್ನು ತಂಡವು ಪಡೆಯತಕ್ಕದ್ದು.
- 1 ವರ್ಷಕ್ಕೆ ಮೇಲ್ಪಟ್ಟು ಅವಧಿಯಲ್ಲಿ ಒಬ್ಬರೇ ಮಾಲೀಕರ ಕಡೆಗೆ ಸತತವಾಗಿ ಕೆಲಸ ಮಾಡುತ್ತಿರುವ ಎಲ್ಲ ಕಾರ್ಮಿಕರಿಂದ ಅನುಬಂಧ–4ರ ಪ್ರಶ್ನಾವಳಿಗೆ ಉತ್ತರವನ್ನು ತಂಡವು ಪಡೆಯತಕ್ಕದ್ದು.

## ಭಾಗ–2

## ಕಾರ್ಮಿಕರಿಗೆ ಪ್ರಶ್ನೆಗಳು

| | | |
|---|---|---|
| 1. | ನೀವು ಯಾರ ಹತ್ತಿರ ಎಷ್ಟು ದಿನಗಳಿಂದ ಕೆಲಸ ಮಾಡುತ್ತಿದ್ದೀರಿ? (ಸಂಸ್ಥೆ/ಮಾಲೀಕರ ಹೆಸರು ಮತ್ತು ವಿಳಾಸ) | |
| 2. | ವಾರದ ರಜೆ ಕೊಡುತ್ತಿದ್ದಾರೆಯೇ? ಕೊಡುತ್ತಿದ್ದರೆ ವೇತನ ಸಹಿತವೇ ಅಥವಾ ಇಲ್ಲವೇ? | |
| 3. | ನೀವು ಅಥವಾ ನಿಮ್ಮ ತಂದೆ/ತಾಯಿ/ಪೋಷಕರು ಸದರಿ ಮಾಲೀಕರಿಂದ ಸಾಲ ಪಡೆದಿದ್ದೀರಾ? | |
| 4. | ಎಷ್ಟು ಸಾಲ ತೆಗೆದುಕೊಂಡಿದ್ದೀರಿ ಮತ್ತು ಯಾವ ಉದ್ದೇಶಕ್ಕಾಗಿ? | |
| 5. | ಸಾಲದ ಹಣಕ್ಕಾಗಿ ಬಡ್ಡಿ ವಿಧಿಸುತ್ತಿರುವರೆ? ಹಾಗಿದ್ದರೆ ಬಡ್ಡಿಯ ದರ ಎಷ್ಟು? | |
| 6. | ಸಾಲವನ್ನು ತೀರಿಸುವುದಕ್ಕಾಗಿ ನೀವು ಆಗಲಿ ನಿಮ್ಮ ಕುಟುಂಬದ ಸದಸ್ಯರಾಗಿಲಿ ಸಾಲ ನೀಡಿದವರ ಮನೆ/ಜಮೀನಿನ ಕೆಲಸ ನಿರ್ವಹಿಸಬೇಕಾಗಿದೆಯೇ?<br>ಹಾಗಾದರೆ ಕೆಲಸ ಮಾಡುವವರ ಹೆಸರು ಮತ್ತು ಸಂಬಂಧ? | |
| 7. | ನಿಮಗೆ ಕೊಡುತ್ತಿರುವ ಮಾಸಿಕ/ವಾರ್ಷಿಕ ಕೂಲಿ ಎಷ್ಟು? | |
| 8. | ನಿಮಗೆ ಕೂಲಿಯನ್ನು ಯಾವ ರೂಪದಲ್ಲಿ ಕೊಡಲಾಗುತ್ತದೆ? (ಹಣ/ಉಪಜೀವನಕ್ಕೆ ವಸ್ತುಗಳು/ಭಾಗಶ: ಹಣ ಭಾಗಶ: ಉಪಜೀವನಕ್ಕೆ ವಸ್ತುಗಳು) | |
| 9. | ನಿಮಗೆ ಕೊಡುತ್ತಿರುವ ಮಾಸಿಕ/ವಾರ್ಷಿಕ ಕೂಲಿ ಎಷ್ಟು? | |
| 10 | ದಿನನಿತ್ಯ ತಿಂಡಿ, ಊಟ ವಗೈರೆ ನೀಡುವರೇ?ಇಲ್ಲವೇ? | |
| 11. | ಇತರೇ ಸೌಲಭ್ಯ:ಬಟ್ಟೆ ಕಂಬಳಿ, ಎಣ್ಣೆ, ಚಪ್ಪಲಿ ಅಥವಾ ವಸತಿ ಇತರೆ ಏನಾದರೂ ನೀಡುವತ್ತಿರುವರೇ? | |
| 12 | ಮೇಲಿನ ಸವಲತ್ತು:ಊಟ, ತಿಂಡಿ, ಕಂಬಳಿ, ಚಪ್ಪಲಿ ಅಥವಾ ವಸತಿ ಇತ್ಯಾದಿಗಳನ್ನು ಹೆಚ್ಚುವರಿಯಾಗಿ ನೀಡುವರೇ ಅಥವಾ ಕೂಲಿಯ ಒಂದು ಭಾಗವೇ? | |
| 13. | ನಿಮಗೆ ಯಾವುದಾದರೂ ಹಬ್ಬಕ್ಕೆ ಇತ್ಯಾದಿಗಾಗಿ ಮುಂಗಡ ನೀಡುತ್ತಾರೆಯೇ? | |
| 14 | ಮುಂಗಡ ಹಣವನ್ನು ಸಾಲಕ್ಕೆ ಸೇರಿಸುತ್ತಾರೆಯೇ? | |

| | | |
|---|---|---|
| 15 | ಕೆಲಸಕ್ಕೆ ಗೈರು ಹಾಜರು ಆದಲ್ಲಿ ದಂಡ ವಿಧಿಸುತ್ತಾರೆಯೇ? ಎಷ್ಟು? | |
| 16 | ಕಾರ್ಮಿಕರ ಮೇಲೆ ಮಾಲೀಕರು ಕೆಳಗಿನ ದೌರ್ಬಲ್ಯವಸಗಿದ ಪ್ರಸಂಗಗಳಿವೆಯೇ?<br>1. ಕಾರ್ಮಿಕರನ್ನು ಬಂಧನದಲ್ಲಿಟ್ಟಿರುವರೆ?<br>2. ಕಾರ್ಮಿಕರಿಗೆ ದೈಹಿಕ ಹಿಂಸೆ ನೀಡುತ್ತಿರುವರೆ?<br>3. ಕಾರ್ಮಿಕರಿಗೆ ಮಾನಸಿಕ ಹಿಂಸೆ ನೀಡುತ್ತಿರುವರೆ?<br>4. ಕಾರ್ಮಿಕರನ್ನು ನಿಂದಿಸುತ್ತಿರುವರೆ? | |
| 17 | ಇಷ್ಟು ದಿನಗಳಿಂದ ದುಡಿದ ಮೇಲೆ ಸಾಲದ ಹಣ ಮತ್ತು ಬಡ್ಡಿ ಕಡಿಮೆ ಆಗಿದೆಯೇ? ಅಥವಾ ಕೇವಲ ಬಡ್ಡಿಯನ್ನು ಮಾತ್ರ ತೀರಿಸಿದ್ದಿರಾ? | |
| 18 | ಹಾಗಿದ್ದರೆ ತೀರಿಸಿದ ಸಾಲದ ಮೊತ್ತ ಮತ್ತು ಬಡ್ಡಿ ಎಷ್ಟು? | |
| 19 | ಸಾಲದ ಹಣದ ಬಡ್ಡಿಯ ಸಹಿತ ಯಾವಾಗ ತೀರುವುದು ಎಂದು ಅಂದಾಜು ಇದೆಯೇ? | |
| 20 | ಕೂಲಿಯನ್ನು ಸಾಲಕ್ಕೆ ಮತ್ತು ಬಡ್ಡಿಗೆ ಹೊಂದಾಣಿಕೆ ಮಾಡಿ ಲೆಕ್ಕ ಪತ್ರ ಮಾಸಿಕ/ಅರೆಮಾಸಿಕ/ವಾರ್ಷಿಕವಾಗಿ ತಿಳಿಸಲಾಗುತ್ತಿದೆಯೇ? | |
| 21 | ಈಗ ಸದ್ಯ ಕೆಲಸ ಮಾಡುವ ಮಾಲೀಕರ ಹತ್ತಿರ ನಿಮ್ಮ ಸಾಲವು ತೀರುವವರೆಗೆ ಕೆಲಸ ಮಾಡಬೇಕೆ? ಅಥವಾ ಬೇರೆ ಕಡೆಗೆ ಕೆಲಸ ಮಾಡಲು ಒಪ್ಪುತ್ತಾರೆಯೇ? | |

ಸ್ಥಳ: ಕಾರ್ಮಿಕರ ಸಹಿ

ದಿನಾಂಕ:

## ಭಾಗ–3

**ಪ್ರಶ್ನಾವಳಿ ನಂತರ ಜೀತದಲ್ಲಿರುವವರು ಧೃಡಪಟ್ಟಲ್ಲಿ ಈ ಮಾಹಿತಿಯನ್ನು ಅಭಿಪ್ರಾಯದೊಂದಿಗೆ ಒದಗಿಸುವುದು**

| | | |
|---|---|---|
| 1. | ಜೀತಕ್ಕಿರುವವರ ಹೆಸರು, ವಯಸ್ಸು ಮತ್ತು ಹಾಲಿ ವಿಳಾಸ | |
| 2. | ಜೀತಕ್ಕಿರುವವರ ಖಾಯಂ ವಿಳಾಸ | |
| 3. | ಜೀತಕ್ಕಿಟ್ಟುಕೊಂಡಿರುವವರ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ | |
| 4. | ಜೀತಕ್ಕಿರುವವರ ಕುಟುಂಬ ಸದಸ್ಯರ ಹೆಸರು, ವಯಸ್ಸು ಮತ್ತು ಸಂಬಂಧ | |
| 5. | ತನಿಖಾ ತಂಡದ ಅಭಿಪ್ರಾಯ | |

ಸ್ಥಳ:

ದಿನಾಂಕ:

ಸಮೀಕ್ಷಾ ತಂಡದವರ ಸಹಿ ಮತ್ತು ಪದನಾಮ

## ಅನುಬಂಧ-5

## ಸಮೀಕ್ಷಾ ತಂಡವು ಸಮೀಕ್ಷಾ ಸಮಯದಲ್ಲಿ ತೆಗೆದ ಭಾವ ಚಿತ್ರಗಳು

ಗ್ರಾಮ/ಪಟ್ಟಣ ಪ್ರದೇಶ/ಸಂಸ್ಥೆ: ದಿನಾಂಕ: ವೇಳೆ

ಸ್ಥಳ:
ತಂಡದ ಸದಸ್ಯರ ಸಹಿ ಮತ್ತು ಪದನಾಮ:

ತಂಡದ ಮುಖ್ಯಸ್ಥರ ಸಹಿ
ಮತ್ತು ಪದನಾಮ

<u>ಅನುಬಂಧ-8</u>

<u>ಜೀತದಾಳುಗಳನ್ನು ಗುರುತಿಸುವ ಬಗ್ಗೆ ಸಮೀಕ್ಷೆ ತಂಡದವರು ಪ್ರತಿವಾರ ಸಲ್ಲಿಸುವ ವರದಿ ನಮೂನೆ</u>

ಗ್ರಾಮ ಹೆಸರು: ತಾಲ್ಲೂಕು: ಜಿಲ್ಲೆ:ಬೆಳಗಾವಿ

| ಕ್ರ. ಸಂ. | ಸಮೀಕ್ಷಾತಂಡದ ಮುಖ್ಯಸ್ಥರ ಹೆಸರು ಮತ್ತು ಪದನಾಮ | ಸಮೀಕ್ಷೆ ಮಾಡಿದ ಸ್ಥಳ/ಪಟ್ಟಣ/ಪ್ರದೇಶ ಸಂಸ್ಥೆಯ ಹೆಸರು ಮತ್ತು ವಿಳಾಸ | ಸಮೀಕ್ಷೆ ಮಾಡಿದ ಸಂಸ್ಥೆಯ ಮಾಲೀಕರ ಹೆಸರು ಮತ್ತು ವಿಳಾಸ | ಸಮೀಕ್ಷಾ ಸಮಯದಲ್ಲಿ ಕಂಡು ಬಂದ ಜೀತದಾಳುಗಳ ಹೆಸರು ಮತ್ತು ವಿಳಾಸ | ಜೀತದಾಳಿನ ವಯಸ್ಸು | ಷರಾ |
|---|---|---|---|---|---|---|
| | | | | | | |

ಸ್ಥಳ:

ದಿನಾಂಕ:

ಸಮೀಕ್ಷಾ ತಂಡದ ಮುಖ್ಯಸ್ಥರ ಸಹಿ
ಮತ್ತು ಪದನಾಮ

## Annexure-9

## Submission of Resurvey Report to the Government

Name of the District:

| Sl. No | Name of the District | The Steps/programmes taken up towards creating awareness among the public | List of the NGOs/Local Social organization involved in the resurvey work | Details of Nodal Officers & resurvey team appointed for resurvey work & information on training provided to | Detail regarding Questionnaire /data collection format adopted for the resurvey | Period of resurvey | Number of suspected cases of bonded labour found during resurvey | Details of cross check done on the reports submitted by the resurvey teams | Details of approval obtained by the vigilance committees on resurvey reports | Number of confirmed bonded labourers identified | No. of cases booked against the Employer | Remarks |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |

Deputy Commissioner,
---------------District